# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 161 |
| 2 | ಸದಸ್ಯರ ಹೆಸರು | ಶ್ರೀ ಸಲೀಂ ಅಹಮದ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 16.02.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಕಂದಾಯ ಭೂಮಿಗಳನ್ನು ರೀಸರ್ವೆ ಮಾಡಿ ಎಷ್ಟು ವರ್ಷಗಳಾಗಿದೆ;</td><td>ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕಂದಾಯ ಭೂಮಿಗಳನ್ನು ಕೆಳಕಂಡ ವರ್ಷಗಳಲ್ಲಿ ರೀಸರ್ವೆ (ಮರುಭೂಮಾಪನ) ಮಾಡಲಾಗಿರುತ್ತದೆ
<table>
<tr><th>ಕ್ರ.</th><th>ಪ್ರಾಂತ್ಯ</th><th>ಅವಧಿ</th></tr>
<tr><td>1</td><td>ಹಳೇ ಮೈಸೂರು ಪ್ರಾಂತ್ಯ</td><td>1900-1917</td></tr>
<tr><td>2</td><td>ಮುಂಬೈ ಪ್ರಾಂತ್ಯ</td><td>1906-1921</td></tr>
<tr><td>3</td><td>ಮದರಾಸು ಪ್ರಾಂತ್ಯ</td><td>1923-1935</td></tr>
<tr><td>4</td><td>ಹೈದರಾಬಾದ್ ಪ್ರಾಂತ್ಯ</td><td>1906-1916</td></tr>
<tr><td>5</td><td>ಕೊಡಗು ಪ್ರಾಂತ್ಯ</td><td>1906-1912</td></tr>
</table></td></tr>
<tr><td>ಆ)</td><td>ಸಾಮಾನ್ಯವಾಗಿ ಎಷ್ಟು ವರ್ಷಗಳಿಗೊಮ್ಮೆ ರೀ-ಸರ್ವೆ ಮಾಡಲಾಗುವುದು;</td><td>ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 115ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.<br>"ಒಂದು ಕಂದಾಯ ವ್ಯವಸ್ಥೆಯು ಮೂವತ್ತು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಪರಂತು, ಕಂದಾಯ ವ್ಯವಸ್ಥೆಯು ಪರಿಷ್ಕರಣೆಯು ಸೂಕ್ತವಲ್ಲವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಾಗ ಅಥವಾ ಅಂಥ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸುವುದು ಯಾವುದೇ ಕಾರಣದಿಂದ ವಿಳಂಬವಾದಾಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಂದಾಯ ವ್ಯವಸ್ಥೆಯ ಅವಧಿಯನ್ನು ತನಗೆ ಸೂಕ್ತವೆಂದು ಕಂಡುಬರುವಂತ ಅವಧಿಯವರೆಗೆ ರಾಜ್ಯ ಸರ್ಕಾರವು ಮುಂದುವರೆಸಬಹುದು."<br>ಮೇಲ್ಕಂಡ ನಿಯಮದನ್ವಯ ಪ್ರಸ್ತುತ ರಾಜ್ಯದಲ್ಲಿ ರೀ-ಸರ್ವೆ/ರೀ-ಸೆಟ್ಲ್‌ಮೆಂಟ್ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ)</td><td>ರೀಸರ್ವೆ ಮಾಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ;</td><td>ಹೌದು<br>ಸರ್ಕಾರವು ರಾಜ್ಯದಲ್ಲಿ ರೀ-ಸೆಟ್ಲ್‌ಮೆಂಟ್/ರೀಸರ್ವೆ (ಮರು ಭೂಮಾಪನ) ಮಾಡುವ ಉದ್ದೇಶ ಹೊಂದಿರುತ್ತದೆ.</td></tr>
</table>

| | | |
|---|---|---|
| ಈ) | ಪ್ರಸ್ತುತ ಯಾವುದಾದರೂ ತಾಲ್ಲೂಕು ಗಳಲ್ಲಿ ರೀಸರ್ವೆ ಕಾರ್ಯ ಮಾಡಲಾಗು ತ್ತಿದೆಯೇ; | ರಾಜ್ಯದಲ್ಲಿ ಮರು ಭೂಮಾಪನವನ್ನು ಅತ್ಯಾಧುನಿಕ ತಂತ್ರಜ್ಞಾನವಾದ ಡ್ರೋಣ್ ಬಳಸಿ ಸರ್ವೇ ಆಫ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಕೈಗೊಳ್ಳಲು ಉದ್ದೇಶಿಸ ಲಾಗಿದೆ. ಸರ್ಕಾರದ ಆದೇಶ ಸಂಖ್ಯೆ. ಕಂಇ 158 ಭೂದಾಸ 2018 ದಿನಾಂಕ 07-11-2018 ಮತ್ತು 28-12-2018 ರಲ್ಲಿ ಮೊದಲನೇ ಹಂತದಲ್ಲಿ ರಾಜ್ಯದ 5 ಜಿಲ್ಲೆಗಳ (ತುಮಕೂರು, ಬೆಳಗಾವಿ, ಉತ್ತರ ಕನ್ನಡ, ಹಾಸನ, ರಾಮನಗರ) 51,000 ಚದರ ಕಿ.ಮೀ. ಪ್ರದೇಶದಲ್ಲಿ ಡ್ರೋಣ್/ಯುಎವಿ ಆಧಾರಿತ ಮರು ಭೂಮಾಪನ ಕಾರ್ಯ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ಪೂರ್ವಸಿದ್ಧತೆ ಕಾರ್ಯ ಪ್ರಾರಂಭಿಸ ಲಾಗಿದ್ದು, ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಡ್ರೋನ್ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಗ್ರೌಂಡ್ ಕಂಟ್ರೋಲ್ ಪಾಯಿಂಟ್‌ಗಳನ್ನು ಸ್ಥಾಪಿಸಿದ್ದು, ಡ್ರೋಣ್ Flying ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 9 ಎಸ್‌ಎಸ್‌ಸಿ 2022 ದಿನಾಂಕ: 04.02.2022 ರಲ್ಲಿ ಉಳಿದ 26 ಜಿಲ್ಲೆಗಳ 1.4 ಲಕ್ಷ ಚ.ಕಿಮೀ. ಪ್ರದೇಶವನ್ನು ಡ್ರೋಣ್/ವೈಮಾನಿಕ ಸಮೀಕ್ಷೆ ಮೂಲಕ ಸರ್ವೆ ಮಾಡಿ ಗ್ರಾಮೀಣ ವಸತಿ ಆಸ್ತಿ, ಕೃಷಿ ಭೂಮಿಯ ಹಕ್ಕುದಾಖಲೆ ಮತ್ತು ನಗರ ಆಸ್ತಿ ದಾಖಲೆಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. |
| ಉ) | ರೀಸರ್ವೆ ಮಾಡುವ ಉದ್ದೇಶ ಸರ್ಕಾರ ಕ್ಕಿದ್ದರೆ ಎಷ್ಟು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು? | |

**<u>ಸಂಖ್ಯೆ: ಕಂಇ 20 ಎಸ್‌ಎಸ್‌ಸಿ 2022</u>**

**(ಆರ್.ಅಶೋಕ)**

ಕಂದಾಯ ಸಚಿವರು